

# ಹೀರಾಪುರದ ಯೋಗಿನಿಯರು

ಶ್ರೀನಿವಾಸ ಮೂರ್ತಿ ಎನ್.ಎಸ್.

ಸ್ತ್ರೀ ವಿಜಯದ ಸಂಕೇತವಾಗಿ ಹಾಗೂ ತಂತ್ರವಿದ್ಯೆ, ಪಂಚಭೂತ ಆರಾಧನೆಯಲ್ಲಿ ಯೋಗಿನಿಯರಿಗೆ ಮೊದಲ ಪ್ರಾಶಸ್ತ್ಯ. 64 ಯೋಗಿನಿಯರಿಗೆ ಭಾರತದಲ್ಲಿ ನಿರ್ಮಾಣವಾದ ಏಳು ದೇವಾಲಯಗಳ ಪೈಕಿ ಒಡಿಶಾದ ಭುವನೇಶ್ವರ ಸನಿಹದ ಹೀರಾಪುರ ಪ್ರಮುಖವಾದದ್ದು.

ಯೋಗಿನಿಯರನ್ನು ಸ್ಥಳೀಯ ಬುಡಕಟ್ಟು ಸಂಸ್ಕೃತಿಯ ಭಾಗವಾಗಿ ಗುರುತಿಸಲಾಗುತ್ತದೆ. ಹೀಗಾಗಿ ಅವರಿಗೆಂದೇ ವಿಶೇಷವಾಗಿ ದೇಗುಲಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ಹೀರಾಪುರದ ದೇವಾಲಯ ಕೂಡ ಒಂದಾಗಿದೆ. ಈ ದೇವಾಲಯ ಭೌಮ ಮತ್ತು ಸೋಮವಂಶಿ ಕಾಲದಲ್ಲಿ ನಿರ್ಮಾಣವಾಗಿದ್ದು, ಆ ಸಂದರ್ಭದಲ್ಲೇ ಶೈವ–ಶಾಕ್ತ ಮತ್ತು ಬೌದ್ಧ ಧರ್ಮದ ತ್ರಾಂತಿಕ ಪಥ ವಜ್ರಾಯನ ಸಮ್ಮಿಲನಗೊಂಡವು ಎಂಬ ಉಲ್ಲೇಖವಿದೆ. ಈ ದೇವಾಲಯವನ್ನು ಭೌಮ ರಾಜವಂಶದ ರಾಣಿ ಹೀರಾದೇವಿ ಸುಮಾರು 9ನೇ ಶತಮಾನದಲ್ಲಿ ನಿರ್ಮಿಸಿದ್ದು ಎನ್ನಲಾಗಿದೆ.

ವೃತ್ತಾಕಾರದಲ್ಲಿ ನಿರ್ಮಾಣಗೊಂಡು ಆಕರ್ಷಕವಾಗಿ ಕಾಣುವ ಈ ದೇಗುಲ 16ನೇ ಶತಮಾನದಲ್ಲಿ ಪರಕೀಯರ ದಾಳಿಗೆ ತುತ್ತಾಗಿ, ಅಲ್ಲಿನ ಶಿಲ್ಪಗಳು ಭಗ್ನಗೊಂಡಿವೆ. 25 ಅಡಿ ವೃತ್ತಾಕಾರದಲ್ಲಿ ದೇವಾಲಯವಿದ್ದು, ಮರಳುಗಲ್ಲಿನಿಂದ ನಿರ್ಮಾಣಗೊಂಡಿದೆ. ಒಳ ಭಾಗದಲ್ಲಿ ವೃತ್ತಾಕಾರದಲ್ಲಿ ಕೋಷ್ಠಕಗಳಿದ್ದು, 64 ಯೋಗಿನಿಯರ ಶಿಲ್ಪಗಳಿವೆ. 63 ಶಿಲ್ಪಗಳು ಉಳಿದಿವೆ. ಮಧ್ಯದಲ್ಲಿ ಕಾಳಿಯ ಶಿಲ್ಪವಿದ್ದು, ಸುತ್ತಲೂ ಯೋಗಿನಿಯರ ಶಿಲ್ಪವಿದೆ. ಇಲ್ಲಿನ ಪ್ರತಿ ಯೋಗಿನಿಯರು, ಮಂಡಲದಲ್ಲಿ ಬರುವ 64 ಮಂಡಲಗಳನ್ನು ಪ್ರತಿನಿಧಿಸುತ್ತಾರೆ. ಇವು ದೇವಿಯ 64 ಯೋಗಿನಿ ಸ್ವರೂಪಗಳು ಎಂದು ಗುರುತಿಸಲಾಗುತ್ತದೆ. ಇದೇ ಮಾದರಿಯನ್ನು ಬೌದ್ಧರ ಕಾಲಚಕ್ರದಲ್ಲಿ ಕೌಲ ಮಾರ್ಗದಲ್ಲಿ ಕಾಣಬರುವ ಮತ್ಸ್ಯೇಂದ್ರನಾಥರ ಎಂಟು ಚಕ್ರಗಳಲ್ಲೂ ಕಾಣಬಹುದು. ಇಲ್ಲಿನ ಶಿಲ್ಪಗಳು, ಒಡಿಶಾದಲ್ಲಿ ಕಾಣಸಿಗುವ ಅಷ್ಟ ಮಾತೃಕೆಯ ಅವತಾರಗಳು ಎಂದು ಕೂಡ ಕರೆಯಲಾಗುತ್ತದೆ.



ಪ್ರತಿ ಶಿಲ್ಪಗಳು ಸುಮಾರು 2 ಅಡಿ ಇದ್ದು, ವಿವಿಧ ವಾಹನಗಳನ್ನು ಹೊಂದಿ, ವಿವಿಧ ಭಂಗಿಯಲ್ಲಿವೆ. ಆಭರಣಗಳು ಮತ್ತು ಕೇಶ ವಿನ್ಯಾಸಗಳು ಗಮನ ಸೆಳೆಯುತ್ತವೆ. 64 ಯೋಗಿನಿಯರನ್ನು ಕ್ರಮವಾಗಿ – ಚಂದ್ರಿಕಾ, ತಾರಾ, ನರ್ಮದಾ, ಯಮುನಾ, ಲಕ್ಷ್ಮೀ, ವರುಣೆ, ಗೌರಿ, ಇಂದ್ರಾಣಿ, ವರಾಹಿ, ಪದಂಬತಿ, ವಾನರಮುಖಿ, ವೈಷ್ಣವಿ, ಪಂಚವರಾಹಿ, ವದ್ಯರೂಪ, ಚರ್ಚಿಕ, ಬೇತಾಲಿ, ಚಿನ್ನಮಸ್ತಕ, ಬಿಂಧ್ಯಾಬಾಸಿನಿ, ಜಲಕಾಮಿನಿ, ಘಟಬಾರ, ಕಕರಾಳಿ, ಸರಸ್ವತಿ, ಬಿರಾಪುರ, ಕೌವೆರಿ, ಭಲ್ಲೂಕ, ನಾರಸಿಂಹಿ, ಬಿರಾಜ, ವಿಕಟನಾನ, ಮೋಹಲಕ್ಷ್ಮೀ, ಕೌಮಾರಿ, ಮಹಾಮಾಯ, ಉಷಾ (ರತಿ), ಕರ್ಕಾರಿ, ಸರ್ಪಶ್ಯ, ಯಶ, ಅಘೋರ, ರುದ್ರಕಾಳಿ, ವಿನಾಯಕಿ (ಗಣೇಶಿನಿ), ಬಿಂದ್ಯಾಬಾಲಿನಿ, ವೀರಕುಮಾರಿ, ಮಹೇಶ್ವರಿ, ಅಂಬಿಕಾ, ಕಾಮಾಯಿನಿ, ಘಟಬಾರಿ, ಸ್ತುತೆ, ಕಾಳೀ, ಉಮಾ, ನಾರಾಯಾಣಿ, ಸಮುದ್ರ, ಬ್ರಾಹ್ಮಿನಿ, ಜ್ವಾಲಾಮುಖಿ, ಅಗ್ನಿಹೋತ್ರಿ, ಅದಿತಿ, ಚಂದ್ರಕಾಂತಿ, ವಾಯುಬೇಗ, ಚಾಮುಂಡ, ಮುರತಿ, ಗಂಗಾ, ಧುಂಬತಿ, ಗಾಂಧಾರಿ, ಸರ್ವಮಂಗಳ, ಅಜಿತ, ಸೂರ್ಯಪುತ್ರಿ ಮತ್ತು ವಾಯುವೀಣಾ ಎಂದು ಗುರುತಿಸಲಾಗುತ್ತದೆ.

ಈ ದೇವಾಲಯದ ಹೊರಭಾಗದಲ್ಲಿ ಸಹ ದೇವಿಯರ ಶಿಲ್ಪಗಳಿದ್ದು ಕಾತ್ಯಾಯಿನಿ, ಭೈರವಿ ಶಿಲ್ಪಗಳು ಗಮನ ಸೆಳೆಯುತ್ತವೆ. ದೇವಾಲಯ ಭಾರತೀಯ ಪುರಾತತ್ವ ಇಲಾಖೆಯ ಅಧೀನದಲ್ಲಿದ್ದು, ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಭುವನೇಶ್ವರಕ್ಕೆ ಬರುವ ಪ್ರವಾಸಿಗರು ಒಡಿಶಾದ ಜನಪದ, ಬುಡಕಟ್ಟು ಸಂಸ್ಕೃತಿಯ ಭಾಗವಾಗಿಯೂ ಈ ದೇವಾಲಯವನ್ನು ನೋಡಬಹುದು. ಇದರೊಂದಿಗೆ, ಭುವನೇಶ್ವರದಿಂದ ಸುಮಾರು 19 ಕಿ.ಮೀ. ದೂರದಲ್ಲಿ ಹೋಗುವ ದಾರಿಯಲ್ಲಿ ಮೇಘೇಶ್ವರ ದೇವಾಲಯ ಮತ್ತು ಹತ್ತಿರದ ದೌಲಿಯಲ್ಲಿ ಅಶೋಕನ ಶಾಸನಗಳು, ಶಾಂತಿ ಸ್ತೂಪಗಳನ್ನೂ ನೋಡಬಹುದು.

ಪ್ರತಿಕ್ರಿಯಿಸಿ: feedback@sudha.co.in